# NPET'S ENGLISH MEDIUM SCHOOL BELGAUM

## SA-I RIVISION for Kannada

## Class: IX

### 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕುವೆಂಪು ಅವರನ್ನು ಮನೆಯವರೆಲ್ಲ ಏನೆಂದು ಕರೆಯುತ್ತಿದ್ದರು?
2. ಕುವೆಂಪು ಅವರ ಮಕ್ಕಳು ಭಿಕ್ಷುಕನೆಂದು ಭಾವಿಸಿದ ಕವಿಯ ಹೆಸರೇನು?
3. ಕುವೆಂಪು ಅವರ ಮಕ್ಕಳು ಚಿಕ್ಕವರಿರುವಾಗ ಕವಿತೆಗಳನ್ನು ಏನೆಂದು ತಿಳಿದಿದ್ದರು?
4. ರಾಜರತ್ನಂ ಅವರು ಪುಟ್ಟಪ್ಪನವರನ್ನು ಏನೆಂದು ತಮಾಷೆ ಮಾಡಿದರು?
5. ಶೇಷಪ್ಪನವರಿಗೆ ಜೀವನದಲ್ಲಿದ್ದ ಉತ್ಕಟ ಆಸೆ ಯಾವುದು?
6. ಶೇಷಪ್ಪನವರು ಜೀವನೋಪಾಯಕ್ಕೆ ಏನು ಮಾಡುತ್ತಿದ್ದರು?
7. ಶೇಷಪ್ಪನವರು ಅಶ್ವತ್ಥ ಕಟ್ಟೆಯನ್ನು ಕಟ್ಟಲು ಗುರುತಿಸಿದ ಸ್ಥಳ ಯಾವುದು?
8. 'ಅರಳಿಕಟ್ಟೆ' ಗದ್ಯ ಭಾಗದ ಆಕರ ಗ್ರಂಥ ಯಾವುದು?
9. ಬಿ.1. ಜೇನು ಕುರುಬರ ಗೀತಾ ಸಾಕುತ್ತಿದ್ದ ಗಂಡು ಆನೆಯ ತಾಯಿ ತೀರಿದ್ದು ಏಕೆ?
10. ಜೇನು ಕುರುಬರ ತಾಯಿ ಆನೆಗೆ ಬೈದಾಗ ಯಾವ ರೀತಿ ಮರುಗುತ್ತಿದ್ದಳು?
11. ಗೀತಾ ಮರಿ ಆನೆಗೆ ಯಾವ ರೀತಿ ಗದರಿ ಬುದ್ಧಿ ಹೇಳುತ್ತಿದ್ದಳು?
12. ಆನೆ ಕಣ್ಣಲ್ಲಿ ನೀರು ಬರುತ್ತಿರುವುದಕ್ಕೆ ಗೀತಾ ನೀಡಿದ ಪ್ರತಿಕ್ರಿಯೆ ಏನು?
13. ಜೇನು ಕುರುಬರ ಗೀತಾಳ ಮಗನೊಬ್ಬ ಸಾಹುಕಾರರ ಅಂಗಡಿಗೆ ಏಕೆ ಹೋಗುತ್ತಿದ್ದನು?
14. ಆನೆ ಮರಿಗೆ 'ಶಿವ' ಎಂದು ಹೆಸರಿಟ್ಟವರು ಯಾರು?
15. ಆನೆ ಶಿವನ ಬಗ್ಗೆ ಗೀತಾ ಯಾವ ಆಸೆ ಇಟ್ಟುಕೊಂಡಿದ್ದಾಳೆ?
16.ಜಿ.ಎಲ್. ಸ್ವಾಮಿಯವರ ಪೂರ್ಣ ಹೆಸರೇನು?
17. ವೀರೇಂದ್ರ ಸಿಂಪಿಯವರು ತಾವು ಯಾವ ರೀತಿಯ ಪ್ರಯಾಣಿಗರಲ್ಲ ಎಂದಿದ್ದಾರೆ?
18. ಲೇಖಕರು ಬಸ್ಸಿಗೆ ಕಾಯುವುದು ಯಾವುದಕ್ಕೆ ಸಮಾನ ಎಂದಿದ್ದಾರೆ?
19. ಲೇಖಕರು ಬಸ್ಸು ನುಗ್ಗಾಟದಲ್ಲಿ ಮೊದಲಿಗನಾಗಬೇಕೆಂದು ಏಕೆ ಬಯಸುತ್ತಾರೆ?
20. ಬಸ್ ಕಂಡಕ್ಟರ್ ಸ್ತ್ರೀ ಪ್ಯಾಸೆಂಜರ್ ಜೊತೆ ಏನೆಂದು ಚರ್ಚಿಸುತ್ತಾನೆ?
21. ಲೇಖಕರು ಸಹ ಪ್ರಯಾಣಿಕನೊಂದಿಗೆ ರೊಚ್ಚಿಗೆದ್ದದ್ದು ಏಕೆ?
22. ನಕ್ಷತ್ರ ಜಾರಿ, ತಮವೆಲ್ಲ ಸೋರಿದುದು ಯಾವಾಗ?
22. ಕವಿಗೆ ಜಗವು ಸವಿಯಾಗಿ ಯಾವಾಗ ಕಂಡಿತು?
23. ಕವಿ ಮಕ್ಕಳಿಗೆ ಹುಸಿನಿದ್ದೆ ಸಾಕು ಮೇಲೇಳಿ ಎಂದು ಏಕೆ ಕರೆ ನೀಡುತ್ತಾರೆ?

24. ಜೀವನದ ನದಿಗಿರುವ ಆತಂಕವೇನು?

25. ಅಜ್ಜನು ಮಗುವಿಗೆ ಅಟ್ಟ ಹತ್ತ ಬೇಡ ಎಂದು ಏಕೆ ಹೇಳುತ್ತಾನೆ?

26 ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ ಎನ್ನುವ ಮಾತಿನಲ್ಲಿ ವ್ಯಕ್ತಗೊಂಡಿರುವ ಭಾವನೆಗಳೇನು?

27. ದೂರದ ಬೆಟ್ಟ ಹೇಗೆ ಕಾಣುತ್ತದೆ?

28. ಮಗು ಬೆಟ್ಟ ಹತ್ತಲು ಬಯಸಿದ್ದು ಏಕೆ?

29. ಡಾ.ಎಲ್. ಹನುಮಂತಯ್ಯನವರು ಯಾವ ವಿಷಯದ ಮೇಲೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ?

30. ಶಬರಿ ಎಲ್ಲಿ ವಾಸವಾಗಿದ್ದಳು?

31. ಶಬರಿ ಯಾರ ನಿರೀಕ್ಷೆಯಲ್ಲಿದ್ದಳು?

32. ಶಬರಿ ರಾಮನಿಗೆ ಕೊಡಲು ಏನನ್ನು ತಂದಳು?

33. ಶಬರಿಗೆ ಶ್ರೀರಾಮನು ಹೇಗೆ ಕಂಡನು?

34 ಶಬರಿ ರಾಮನಿಗೆ ಕೊಡಲು ಏನನ್ನು ತಂದಳು?

35. ಕವಿಗೆ ಪ್ರಕೃತಿಗಿಂತಲೂ ಹೆಚ್ಚು ಚಂದವಾಗಿ ಕಂಡದ್ದು ಯಾವುದು?

36. ಹೊಳೆ, ಅಲೆ ಹಾಗೂ ಗಾಳಿ ಹೇಗೆ ನಾದಗೈಯುತ್ತವೆ?

37 ಜೋಲಿಯೊಳಗಿನ ಹಸುಳೆ ಹೇಗೆ ನಗುತ್ತದೆ?

38. ಗಿರಿಯ ನವಿಲಿನ ಚಂದವೇನು?

39 ಕರಿಕಂಗಳಲ್ಲಿ ಎಂತಹ ಚಂದವಿದೆ?

**2) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕುವೆಂಪು ತಮ್ಮ ಮಕ್ಕಳಿಗೆ ರಾಜರತ್ನಂ ಅವರನ್ನು ಹೇಗೆ ಪರಿಚಯಿಸಿದರು?

2. ರಾಜರತ್ನಂ ಅವರ ವೇಷಭೂಷಣಗಳು ಹೇಗಿದ್ದವು?

3. ಕವಿತೆಯ ಜೊತೆಗೆ ಕವಿಯ ಹೆಸರನ್ನೂ ಏಕೆ ನೆನಪಲ್ಲಿಡಬೇಕು?

4. ಕುವೆಂಪು ಅವರು ರಾಜರತ್ನಂ ಅವರನ್ನು ಮನೆಯ ಒಳಕ್ಕೆ ಹೇಗೆ ಬರಮಾಡಿಕೊಂಡರು?

5. ಶೇಷಪ್ಪನವರ ದೇಹಾರೋಗ್ಯದ ಸ್ಥಿತಿ ಹೇಗಿತ್ತು?

6. ಶೇಷಪ್ಪನವರು ತಮ್ಮ ಆಸೆ ನೆರವೇರಿದುದರಿಂದ ಕೃತಜ್ಞತೆಯನ್ನು ಹೇಗೆ ಸಲ್ಲಿಸಿದರು?

7. ಶೇಷಪ್ಪನವರ ಆಸೆಯನ್ನು ಗಮನಿಸಿದ ಲೇಖಕರಿಗೆ ಬಾಲ್ಯದಲ್ಲಿ ಅನಿಸಿದ್ದೇನು?

8. ಅಶ್ವತ್ಥಕಟ್ಟೆ ಜನರಿಗೆ ಹೇಗೆ ಉಪಯುಕ್ತವಾಗಿದೆ?

9. ಲೇಖಕರು ಶೇಷಪ್ಪನವರಿಗೆ ಕೃತಜ್ಞತೆ ಅರ್ಪಿಸಿದ್ದು ಏಕೆ?

10. ಗೀತಾ ಅಮ್ಮಾಳಮ್ಮನಲ್ಲಿ ಆನೆ ಶಿವನ ಬಗ್ಗೆ ಏನೆಂದು ಬೇಡಿಕೊಂಡಿದ್ದಳು?

11. ಆನೆ ಲಂಬೋದರ ತೀರಿಕೊಂಡದ್ದು ಹೇಗೆ?

12. ಆನೆ ಲಂಬೋದರ ತೀರಿದಾಗ ಗೀತಾ ಯಾವ ರೀತಿ ದುಃಖಿಸಿದಳು?

13. ವೀರೇಂದ್ರ ಸಿಂಪಿ ಅವರಿಗೆ ತಾವು ಸಂದರ್ಶಿಸಿದ ಸ್ಥಳಗಳ ಬಗ್ಗೆ ಇರುವ ಅಭಿಪ್ರಾಯವೇನು?

14. ವೀರೇಂದ್ರ ಸಿಂಪಿ ಅವರಿಗೆ ಪ್ರಯಾಣದಲ್ಲಿ ಯಾವ ಯಾವ ರೀತಿಯ ಅನುಭವಗಳಾಗಿವೆ?

15. ಲೇಖಕರು ಬಸ್ಸು ಏರುವ ಸಂದರ್ಭದಲ್ಲಿ ಯಾವ ರೀತಿಯ ವಾತಾವರಣ ಉಂಟಾಗುತ್ತದೆ ಎಂದಿದ್ದಾರೆ?

16. ಲೇಖಕರು ಬಸ್ಸಿನ ಕಿಟಕಿ ಬಳಿಯ ಆಸನದಲ್ಲಿ ಕೂರಲು ಬಯಸಿದ್ದುದು ಏಕೆ?

17. ಬಸ್ಸಿನಲ್ಲಿ ಯಾವ ಯಾವ ವಿಷಯಗಳ ಮೇಲೆ ಮಾತುಕತೆ ನಡೆಯುತ್ತವೆ?

18. ಬೆಳಕೆಂಬ ಬೇಟೆಗಾರ ಬಂದಾಗ ಪ್ರಕೃತಿಯಲ್ಲಿ ಯಾವ ಬದಲಾವಣೆಗಳಾಗುತ್ತವೆ?

19. ಜೀವನದ ಸವಿಯನ್ನು ಸವಿಯಲು ತಡಮಾಡಬಾರದು, ಏಕೆ?

20.ಬೆಳಗು ಜಾವ' ಕವಿತೆಯಲ್ಲಿ ಕವಿ ನೀಡಿರುವ ಸಂದೇಶವೇನು?

21. ಬೆಟ್ಟ ಹತ್ತುವ ಹಾದಿ ಹೇಗಿರುತ್ತದೆ?

22. ಅಟ್ಟ ಮತ್ತು ಬೆಟ್ಟಕ್ಕಿರುವ ವ್ಯತ್ಯಾಸಗಳೇನು?

23. 'ಬೆಟ್ಟ ಹತ್ತ ಬೇಡ' ಕವಿತೆಯಲ್ಲಿ ಮಗುವಿನ ಸಂಕಲ್ಪವೇನು?

24. 'ಬೆಟ್ಟ ಹತ್ತ ಬೇಡ' ಕವಿತೆಯಲ್ಲಿ ಅಜ್ಜನ ಉಪದೇಶವೇನು?

25 ಶಬರಿಯು ರಾಮನನ್ನು ಹೇಗೆ ಕಾಯುತ್ತಿದ್ದಳು?

26. ರಾಮ ಬಳಿಯಲ್ಲಿ ಕೂತಾಗ ಶಬರಿ ಹೇಗೆ ಸಂಭ್ರಮಿಸಿದಳು?

27 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಕವಿಗೆ ಚಂದವಾಗಿ ಕಂಡ ಪ್ರಕೃತಿಯ ದೃಶ್ಯಗಳಾವುವು?

28. ಕವಯಿತ್ರಿಯು ತೊಟ್ಟಿಲಲ್ಲಿ ನಗುವ ಹಸುಳೆಯ ಚಂದವನ್ನು ಹೇಗೆ ವರ್ಣಿಸಿದ್ದಾರೆ?

**3) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕುವೆಂಪು ಅವರು ಭಿಕ್ಷೆ ನೀಡಿ ಯಾವ ರೀತಿ ಮೋಸಕ್ಕೆ ಒಳಗಾಗಿದ್ದರು?

2. ಕು. ಶೇಷಪ್ಪನವರ ವ್ಯಕ್ತಿತ್ವದ ವಿಶೇಷತೆಗಳೇನು?

3. ಶೇಷಪ್ಪನವರಿಗೂ ಲೇಖಕರ ಸೋದರತ್ತೆಗೂ ನಡೆದ ಸಂಭಾಷಣೆ ಕುರಿತು ಬರೆಯಿರಿ?

4. ಜೇನು ಕುರುಬರ ತಾಯಿ ಆನೆ ಮಗನನ್ನು ಹೇಗೆ ಸಾಕುತ್ತಿದ್ದಳು?

5. ಮರಿ ಆನೆ ಗೀತಾಳಿಗೆ ಮಾಡುತ್ತಿದ್ದ ಕೀಟಲೆಗಳಾವುವು?

6. ಲೇಖಕರಿಗೆ ಲಾರಿ ಪ್ರಯಾಣದಲ್ಲಿ ಯಾವ ಅನುಭವಗಳಾದವು?

7. ವೀರೇಂದ್ರ ಸಿಂಪಿ ಅವರಿಗೆ ಬಸ್ಸು ಪ್ರಯಾಣದಲ್ಲಿ ಆದ ಸುಖ ದುಃಖಗಳನ್ನು ಸಂಗ್ರಹಿಸಿ ಬರೆಯಿರಿ.

8. 'ಬೆಳಗು ಜಾವ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

9. ಶಬರಿಯು ರಾಮನ ಬರುವಿಕೆಗಾಗಿ ಏನೇನು ತಯಾರಿಯನ್ನು ಮಾಡಿಕೊಂಡಳು?

10. ರಾಮ ಬಂದಾಗ ಶಬರಿ ಆತನನ್ನು ಉಪಚರಿಸಿದ ರೀತಿಯನ್ನು ವರ್ಣಿಸಿ.

11. ರಾಮನ ಭೇಟಿಯಿಂದ ಶಬರಿಯಲ್ಲಿ ಕಣ್ಣೀರು ಇಳಿದದ್ದೇಕೆ?

12 'ಅಟ್ಟ ಹತ್ತ ಬೇಡ' ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳಾವುವು

13. 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಕವಯಿತ್ರಿ ಜಗವನ್ನೆಲ್ಲಾ ತೂಗಿರುವ ಪರಿ ಹೇಗೆ?

14. 'ತೊಟ್ಟಿಲು ತೂಗುವ ಹಾಡು' ಕವಿತೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**4) ಸಂದರ್ಭದೊಡನೆ ವಿವರಿಸಿರಿ.**

1. "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ".

2. "ಇವರು ಯಾರು ಗೊತ್ತಾ?".

3. "ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ."

4. "ಒಂದಿಷ್ಟು ಹಾಲು ಕುಡಿದು ಹೋಗಬೇಕು."

5. "ಅಕ್ಕಿ ಬೇಳೆ ಸಾಮಗ್ರಿಗಳನ್ನು ನಮ್ಮ ಮನೆಯಿಂದಲೇ ಕೊಡುತ್ತೇನೆ."

6. "ಅಶ್ವತ್ಥ ಬರಿಯ ಮರವಲ್ಲ.

7. ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?

8. "ಅದು ಮುಗ್ಗರಿಸಿದರೆ ಇವಳ ಕರುಳು ದಸಕ್ಕೆನ್ನುತ್ತದೆ."

9. "ಗೀತಾ ನೋಡು ಶಿವನ ಕಣ್ಣಲ್ಲಿ ನೀರು ಬರುತ್ತಿದೆ"

10. "ದೇವರೇ, ಈ ಕೆಟ್ಟ ಮನುಷ್ಯರಿಂದ ಆನೆಗಳನ್ನೂ ಕಾಡು ಕುರುಬರನ್ನೂ ಕಾಪಾಡು."

12. "ಈ ಶಿವನನ್ನು ಬೆಳೆಸಿ ದೊಡ್ಡ ಪಟ್ಟದಾನೆ ಮಾಡಿಯೇ ತಾನು ಜೀವ ಬಿಡುವುದು.

13. "ಈ ಕೂಸು ನಿಮ್ಮದೇ ಏನ್ರೀ?"

14. "ಕರ್ನಾಟಕದ ಬಗ್ಗೆ ನಿಮ್ಮ ಅಭಿಪ್ರಾಯವೇನು?"

15. "ಬಸ್ಸಿನ ನಲ್ವತ್ತು ಮುಖಗಳು ನನ್ನನ್ನು ದಿಟ್ಟಿಸಿ ನೋಡುತ್ತಿದ್ದವು.

16. "ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು."
17. "ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ."
18. "ಜೀವನದ ನದಿಗೆ ಸೆಳೆವಿಹುದು."
19. "ಅಟ್ಟ ಹತ್ತದವನು ಬೆಟ್ಟ ಹತ್ತುತ್ತಾನೆಯೆ"
20. "ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ"